## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

**ಸಿ.ಸಿ.230/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕುಮಾರ | ಪ್ರಾ.ಸಾಃ 2 |
| ತಂದೆಯ/ಗಂಡನ ಹೆಸರು | : | ಚಂದ್ರಪ್ಪ | ಚಾಸಾಃ 2 |
| ವಯಸ್ಸು | : | 50 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಆವಿನಹಟ್ಟಿ ಗ್ರಾಮ | ದಿಃ05.03.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಚಾಸಾ.3 ಮತ್ತು 4 ರವರು ಗೊತ್ತು. ಸಾಕ್ಷಿ ನಿಪಿ.2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ.2 ರ ಸಹಿಯನ್ನು ನಮ್ಮ ಗ್ರಾಮದ ಚಾಸಾ.1 ಮತ್ತು 4 ರವರ ಮನೆಯ ಬಳಿ ಗಲಾಟೆಯ ವಿಚಾರದ ಕುರಿತು ಮಾಡಿದ್ದೆನು. 2022 ನೇ ಸಾಲಿನಲ್ಲಿ ಸದರಿ ಸಹಿಯನ್ನು ಮಾಡಿದ್ದೆನು. ಪೊಲೀಸರು ಸ್ಥಳಕ್ಕೆ ಬಂದು ಗಲಾಟೆ ನಡೆದ ಜಾಗದಲ್ಲಿ ಸ್ಥಳ ಪಂಚನಾಮೆಯನ್ನು ಜರುಗಿಸಿದರು. ಸದರಿ ಮಹಜರಿನ ಸಮಯದಲ್ಲಿ ಮು.ಮಾ.1 ಮತ್ತು 2 ರ ದೊಣ್ಣೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ನನ್ನೊಂದಿಗೆ ಚಾಸಾ.3 ಮತ್ತು 4 ರವರು ಇದ್ದರು. ಸದರಿ ಸ್ಥಳವನ್ನು ಪೊಲೀಸರಿಗೆ ಚಾಸಾ.4 ರವರು ತೋರಿಸಿರುತ್ತಾರೆ. ಚಾಸಾ.3 ಮತ್ತು 4 ರವರು ಸಹ ನಿಪಿ.2 ರ ಮಹಜರಿಗೆ ಸಹಿಯನ್ನು ಮಾಡಿರುತ್ತಾರೆ. ಸಾಕ್ಷಿ ಮಹಜರಿನ ಸಮಯದಲ್ಲಿ ತೆಗೆದ ಛಾಯಾಚಿತ್ರದಲ್ಲಿನ ತನ್ನ ಮತ್ತು ಚಾಸಾ.3 ಮತ್ತು 4 ರವರ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಛಾಯಾಚಿತ್ರವನ್ನು ನಿಪಿ.3 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ರ ಕೋಲುಗಳನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ಜರುಗಿಸುವ ಪೂರ್ವದಲ್ಲಿ ಪೊಲೀಸರು ನನಗೆ ನೋಟೀಸನ್ನು ನೀಡಿರಲಿಲ್ಲ. ಸಾಕ್ಷಿ ತನಗೆ ನೀಡಿದ ನೋಟೀಸಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನೋಟೀಸನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ಸ್ಥಳ ಪಂಚನಾಮೆ ಜರುಗಿಸಿದ ಸಮಯದಲ್ಲಿಯೇ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು : ಆರೋಪಿಯ ಪರವಾಗಿ : ಶ್ರೀ ವಕೀಲರಿಂದ**

2. ನಾನು ಪದವಿ ವ್ಯಾಸಂಗ ಮಾಡಿದ್ದೇನೆ. ನಾನು 2015 ರಿಂದ 2020 ರವರೆಗೆ ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದೆನು ಎಂದರೆ ಸರಿ. ಸ್ಥಳ ಪಂಚನಾಮೆಯ ಸಮಯದಲ್ಲಿ ಸುಮಾರು 7-8 ಜನ ಇದ್ದರು. ಚಾಸಾ.3, 4, ಶ್ರೀನಿವಾಸ ಮತ್ತು ಇತರರು ಇದ್ದರು. ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 3.45 ರಿಂದ 4.00 ಗಂಟೆಯವರೆಗೆ ಮಾಡಿರುತ್ತಾರೆ. ಸ್ಥಳ ಪಂಚನಾಮೆಯ ಸ್ಥಳದ ಪೂರ್ವಕ್ಕೆ ಶಿವಮೂರ್ತಪ್ಪರವರ ಮನೆ, ಪಶ್ಚಿಮಕ್ಕೆ ಬಂಗಾರಪ್ಪರವರ ಮನೆ, ಉತ್ತರಕ್ಕೆ ಶಿವಮೂರ್ತಪ್ಪರವರ ಖಾಲಿ ಜಾಗ, ದಕ್ಷಿಣಕ್ಕೆ ಶೇಖರಪ್ಪರವರ ಮನೆ ಇದೆ. ಸ್ಥಳಪಂಚನಾಮೆಗೆ ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮು.ಮಾ.1 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ.4 ರವರು ಆರ್ಥಿಕವಾಗಿ ಸದೃಢವಾಗಿದ್ದು, ನನ್ನ ರಸ್ತೆ ಮತ್ತು ಚರಂಡಿ ಕಾಮಗಾರಿಯ ಸಮಯದಲ್ಲಿ ಆರ್ಥಿಕವಾಗಿ ಸಹಾಯ ಮಾಡಿದ್ದರು ಎಂದು, ಚಾಸಾ.4 ರವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ